5

# "ಒಂದು ಮದುವೆ ಆಯಿತು"

## (2:1-11)

*ತಂದೆಯೇ, ಈ ಪಾಠದಲ್ಲಿ ನಿನ್ನ ಕುಮಾರನಾದ ಯೇಸು ಕ್ರಿಸ್ತನ ಮಹಿಮೆಯ ಕಡೆಗೆ ನೋಡಿ ನಾವು ಎಲ್ಲರೂ ನಿನ್ನ ಮಹಿಮೆಯನ್ನು ಅನುಭವಿಸುವಂತೆ ಮಾಡು ಆತನ ಮಹಿಮೆಯುಳ್ಳ ನಾಮದಲ್ಲಿ ನಿನ್ನನ್ನು ಪ್ರಾರ್ಥಿಸುತ್ತೇವೆ. ಆಮೆನ್.*

ನಿಶ್ಚಯವಾಗಿಯೂ ಸಂಪ್ರದಾಯಗಳು ಸಮಯದೊಂದಿಗೆ, ಸ್ಥಳದೊಂದಿಗೆ ಭಿನ್ನ ಭಿನ್ನವಾಗಿರುತ್ತವೆ, ಆದರೆ ಮದುವೆಗಳಿಗೆ ಯಾವಾಗಲೂ ಅವುಗಳ ಬಗ್ಗೆ ಒಂದು ನಿಶ್ಚಿತವಾದ ಒತ್ತಡವಿರುತ್ತದೆ. ಕೆಲವೊಂದು ಕಾರಣಕ್ಕಾಗಿ, ಅವು ಒಳ್ಳೇ ಅರ್ಥವುಳ್ಳ ಜನರನ್ನು ವಕ್ರವಾದ ಪರಿಸ್ಥಿತಿಯಲ್ಲಿ ಹಾಕುವಂತೆ ಕಾಣುತ್ತದೆ. ಯೋಹಾನ 2:1-11, ನಮ್ಮ ಪಠ್ಯವು, ಉದ್ವೇಗವನ್ನು ಅನುಭವಿಸಿದ ಒಂದು ಮದುವೆಯಲ್ಲಿ ಯೇಸುವು ಭಾಗವಹಿಸಿದ್ದರ ಬಗ್ಗೆ ಹೇಳುತ್ತದೆ. ಈ ಘಟನೆಯಲ್ಲಿ ಆತನು ಮಾಡಿದ್ದನ್ನು ಗಮನಿಸುವಾಗ, ಅದು ಮನುಷ್ಯ ಕುಮಾರನು (1:51) ನಿಜವಾಗಿಯೂ ಯಾರಾಗಿರುವನೆಂಬುದರ ಬಗ್ಗೆ ಬಹಳವಾದದ್ದನ್ನು ನಮಗೆ ಹೇಳುತ್ತದೆ.

### ಯೇಸುವು ಒಂದು ಮದುವೆಯಲ್ಲಿ ಭಾಗವಹಿಸಿದನು (2:1, 2)

ಯೇಸುವಿನ ತಾಯಿಯು ಒಂದು ಮದುವೆಗೆ ಆಮಂತ್ರಿಸಲ್ಪಟ್ಟಳು. ತಮ್ಮ ಸ್ವಂತ ಆಮಂತ್ರಣವಾದ ಮೇಲೆ ಇಲ್ಲವೇ ಮರಿಯಳ ಆಮಂತ್ರಣದ ತಳಹದಿಯ ಮೇಲೆ ಯೇಸುವು ಮತ್ತು ಆತನ ಶಿಷ್ಯರೂ ಮದುವೆಯಲ್ಲಿ ಭಾಗವಹಿಸಿದರು. ಅದು ಗಲಿಲಾಯದ ಕಾನಾ ಎಂಬ ಗ್ರಾಮದಲ್ಲಿ ನಡೆಯಿತು. ಅದು ಯೇಸುವಿನ ಬಾಲ್ಯ ಪ್ರಾಯದ ಮನೆಯ ಸಮೀಪದಲ್ಲಿತ್ತೆಂದು ತೋರಿಸಲು, ಕಾನಾದ ದೀಪಗಳನ್ನು ರಾತ್ರಿಯಲ್ಲಿ ನಜರೇತಿನಿಂದ ನೋಡಬಹುದಾಗಿತ್ತೆಂದು, ಒಬ್ಬ ದೊಡ್ಡ ಬೈಬಲಿನ ಭಾಷಾಂತರಕಾರನಾಗಿದ್ದ ಜೆರೋಮನು (ಕ್ರಿ.ಶ. 345-420) ಹೇಳಿದ್ದಾನೆ.

ಮೊದಲನೆಯ ಶತಮಾನದಲ್ಲಿಯ ಯೆಹೂದಿ ಮದುವೆಯ ಬಗ್ಗೆ ಬಹಳಷ್ಟು ತಿಳಿದಿದ್ದರೂ, ಅವರ ಮದುವೆಗಳ ವಿವರಗಳ ಬಗ್ಗೆ ಏನೂ ತಿಳಿದಿರುವದಿಲ್ಲ. ನಾವು ಹೀಗೆ ಯೋಚಿಸುತ್ತೇವೆ. ಮದುವೆಯ ಘಟನೆಯ ಮದುಮಗಳಿಲ್ಲದೇ, ಮದುಮಗನ ಮನೆಯಲ್ಲಿ ಪ್ರಾರಂಭವಾಗುತ್ತದೆ. ಅವನ ಸ್ನೇಹಿತರು ಮತ್ತು ಕುಟುಂಬದವರು ಆನಂದಕರವಾದ ಗುಂಪಾಗಿ ಕೂಡಲು ಬರುತ್ತಾರೆ ಮತ್ತು ಪಟ್ಟಣದಲ್ಲಿ ಒಂದಾಗಿ ನಡೆಯುತ್ತಾರೆ, ಹೆಚ್ಚಾಗಿ ದೂರದ, ಸುತ್ತು ಸುತ್ತಾಗಿ ಹೋಗುವ ಬೀದಿಗಳಲ್ಲಿ ನಡೆದು ಮದುಮಗಳ ಮನೆಗೆ ಹೋಗುತ್ತಾರೆ. ಅಲ್ಲಿ, ಮದುವೆಯ ಆಚಾರ ವಿಧಿಯು ನಡೆಯುತ್ತದೆ; ಮದುಮಗಳ ಮನೆಯಲ್ಲಿ ಉತ್ಸವದ ಸಮಯದ ನಂತರ ಹೊಸದಾಗಿ ಮದುವೆಯಾದರು ಮತ್ತು ಇಡೀ ಗುಂಪು ಪಟ್ಟಣದ ಬೀದಿಗಳ ಮುಂಖಾತರ ಇನ್ನೊಂದು ಮೆರವಣಿಗೆಯಾಗಿ ಹೋಗುತ್ತಾರೆ. ಈ ಸಲ, ಅವರು ಮದುಮಗನ ಮನೆಗೆ ಹೋಗುತ್ತಾರೆ. ಅಲ್ಲಿ ಒಂದು ವಾರದವರೆಗೆ ಔತಣ ಮಾಡುವುದು ನಡೆಯುತ್ತದೆ. ಯೋಹಾನ 2ರಲ್ಲಿ ಯೇಸುವು ತಾನೇ ಭಾಗವಹಿಸಿದ ಮದುವೆಯಲ್ಲಿ ಇವೆಲ್ಲವೂ ಬಹುಶಃ ಒಳಗೊಂಡಿದ್ದಿರ ಬೇಕು.

ಈ ಆಚರಣೆಯಲ್ಲಿ ಯೇಸುವು ಪೂರ್ಣ ಭಾಗಿಯಾಗಿದ್ದನು. ಅದು ಸಂತೋಷದ ಸಮಯವಾಗಿತ್ತು, ಆನಂದದ ಮತ್ತು ನಗುವ ಸಮಯ ಅದಾಗಿತ್ತು. ಯೇಸುವು ಮದುವೆಯಲ್ಲಿ

ಭಾಗವಹಿಸುವದನ್ನು ಆಯ್ದುಕೊಂಡನೆಂಬ ಸತ್ಯವನ್ನು ತಪ್ಪಿಸಿಕೊಳ್ಳ ಬೇಡಿರಿ. ನೀವು ಆತನನ್ನು ಅಲ್ಲಿ ಕಲ್ಪಿಸುವಿರೋ? ಇತರ ಅತಿಥಿಗಳೊಂದಿಗೆ ಆತನು ಮಾತಾಡಿದಂತೆ ಆತನ ವಿಶ್ರಮಿಸಿಕೊಳ್ಳುವಿಕೆಯ ಮುಗುಳ್ನಗೆಯನ್ನು ಕಲ್ಪಿಸುವಿರೋ? ಸ್ವಲ್ಪದರಲ್ಲಿ, ಯೇಸುವಿಗೆ ಒಳ್ಳೆಯ ಸಮಯವಿತ್ತೆಂಬುದನ್ನು ನೀವು ಊಹಿಸಬಲ್ಲಿರೋ? ನಿಮ್ಮ ಮನಸಿನಲ್ಲಿ ನೀವು ಚಿತ್ರಿಸುವ ಯೇಸುವು ಆನಂದವನ್ನು ಅನುಭವಿಸುವನೋ? ಮದುವೆಯ ಆಚರಣೆಯಲ್ಲಿ ಆತನು ಮನೆಯಲ್ಲಿದ್ದಂತೆ ಆಗಿತ್ತೋ? ಈ ಪಠ್ಯದ ಯೇಸುವು ನಿಜವಾಗಿಯೂ ಇದ್ದನು. ಹತ್ತೊಂಭತ್ತನೆಯ ಶತಮಾನದ ಇಂಗ್ಲೀಷ್ ಪ್ರಸಂಗಿ, ಸಿ. ಎಚ್. ಸ್ಪರ್ಜನ್ ಆನಂದದ ಬಗ್ಗೆ ಮಾತಾಡಿದ್ದಾನೆ:

> ಪ್ರಾಣಗಳನ್ನು ಗೆಲ್ಲುವ ಎಲ್ಲರ ಸಂತೋಷವನ್ನು ನಾನು ಹೊಗಳುತ್ತೇನೆ; ಚಪಲ ಸ್ವಭಾವವನ್ನು ಮತ್ತು ಹುರುಳಿಲ್ಲದ್ದನ್ನು ಅಲ್ಲ, ಆದರೆ ವಿಹಿತವಾದ ಮತ್ತು ಸಂತೋಷದ ಮನಸ್ಸನ್ನು ಹುಳಿರಸಕ್ಕಿಂತ ಜೇನುತುಪ್ಪದಿಂದ ಹೆಚ್ಚು ನೊಣಗಳು ಹಿಡಿಯಲ್ಪಡುತ್ತವೆ. ಮತ್ತು ತನ್ನ ನೋಟಗಳಲ್ಲಿ ನರಕವನ್ನು ಹೊತ್ತುಕೊಂಡವನಿಗಿಂತ ಹೆಚ್ಚಾಗಿ ತನ್ನ ಮುಖದಲ್ಲಿ ಪರಲೋಕವನ್ನು ಧರಿಸಿಕೊಂಡ ಮನುಷ್ಯನಿಂದ ಹೆಚ್ಚು ಪ್ರಾಣಗಳು ಪರಲೋಕಕ್ಕೆ ನಡಿಸಲ್ಪಡುತ್ತವೆ.[1]

"ಯೇಸುವು ಎಂದೂ ಸಂತೋಷದಿಂದಿರುವದನ್ನು ಒಂದು ಅಪರಾಧವೆಂದು ಎಣಿಸಲಿಲ್ಲ. ಆತನ ಅನುಯಾಯಿಗಳು ಯಾಕೆ ಹಾಗೆ ಮಾಡಬೇಕು" ಎಂದು ವಿಲಿಯಮ್ ಬಾರ್ಕ್ಲೆ ವ್ಯಾಖ್ಯಾನಿಸಿದನು.[2]

ಯೋಹಾನನು, ಮದುವೆಯ ಔತಣದಲ್ಲಿ ಕಿಟಕಿಯಲ್ಲಿ ಇಣುಕಿ ನೋಡಿ, ಯೇಸುವು ತಾನೇ ಸಂತೋಷಪಡುವದನ್ನು ಗಮನಿಸಲು ಬಯಸಿದನೆಂದು ನಾನು ನಂಬುತ್ತೇನೆ. ಯೇಸುವಿಗೆ ಮಾಡಲು ಬಹಳವಾದದ್ದು ಇತ್ತು, ಕೆಡುಕು ಲೋಕದಲ್ಲಿತ್ತು, ಮತ್ತು ಶಿಲುಬೆಯು ಆತನಿಗಾಗಿ ದಾರಿಯಲ್ಲಿ ಕಾದುಕೊಂಡಿತ್ತು. ಈ ಎಲ್ಲಾ ಯೋಚನೆಗಳು ಯೇಸುವನ್ನು ಸತತವಾಗಿ ಕಠಿಣವಾದ ಮತ್ತು ಭಾರವಾದ ಹೃದಯವುಳ್ಳವನ್ನನಾಗಿ ಇಟ್ಟಿರಬಹುದು; ಆದರೆ ಮನುಷ್ಯ ಕುಮಾರನು ಒಂದು ಔತಣದಲ್ಲಿ ಆನಂದಿಸುವದಕ್ಕೆ, ಸ್ನೇಹಿತರನ್ನು ಸಂದರ್ಶಿಸುವದಕ್ಕೆ, ಮದುಮಕ್ಕಳನ್ನು ಗೌರವಿಸಲಿಕ್ಕೆ, ಮತ್ತು ಕಾನಾದಲ್ಲಿ ಮದುವೆಯಲ್ಲಿ ಆಚಲಿಸುವದಕ್ಕೆ ಸಮಯ ತೆಗೆದು ಕೊಂಡನು, ಆನಂದಕ್ಕಾಗಿ ಅವಕಾಶ ಕೊಡದ ಯೇಸುವಿನ ಬಗೆಗಿನ ಯಾವುದೇ ವಿಚಾರವು ಅಪರಿಪೂರ್ಣವಾದದ್ದಾಗಿದೆ.

## ಯೇಸುವು ಕುಟುಂಬದೊಂದಿಗೆ ಪಾಲ್ಗೊಂಡನು (2:3-5)

ಆಚರಣೆಯು ಮುಂದುವರಿದಂತೆ "ದ್ರಾಕ್ಷಾರಸವು ಸಾಲದೆ ಹೋಯಿತು" (2:3). ಯೇಸುವಿನ ತಾಯಿಯು ಸಹಜವಾಗಿ ಈ ತೊಡಕಿನ ಪರಿಸ್ಥಿತಿಯನ್ನು ಪರಿಹರಿಸಲು ಜವಾಬ್ದಾರಿಕೆಯ ಭಾವನೆಯುಳ್ಳವಳಾಗಿ, ಅವರ ಬಗ್ಗೆ ಏನನ್ನಾದರೂ ಮಾಡಲು ತನ್ನ ಮಗನನ್ನು ಕರೆದಳು. ಯೇಸುವು ಏನು ಮಾಡಬೇಕೆಂದು ಆಕೆ ಹೇಳಲಿಲ್ಲ; "ಅವರಲ್ಲಿ ದ್ರಾಕ್ಷಾರಸವಿಲ್ಲ" (2:3) ಎಂದಷ್ಟೇ ಆಕೆ ಹೇಳಿದಳು. "ಅಮ್ಮ ನನ್ನ ಗೊಡವೆ ನಿನಗೇಕೆ? ನನ್ನ ಸಮಯವು ಇನ್ನೂ ಬಂದಿಲ್ಲ" (2:4) ಎಂಬುದು ಆಕೆಗೆ ಯೇಸುವಿನ ಉತ್ತರವಾಗಿತ್ತು, ಈ ಹೇಳಿಕೆಯ ಅಕ್ಷರಶಃ ಗ್ರೀಕ್ ಭಾಷಾಂತರವು "ನನಗೂ ಮತ್ತು ನಿನಗೂ ಏನು?" ಎಂದಾಗುತ್ತದೆ. ಯೇಸುವಿನ ಮಾತುಗಳಲ್ಲಿ ಹಠಾತ್ತತೆಯು ನಮ್ಮನ್ನು ಪೀಡಿಸುತ್ತದೆ. ಆತನು ನಮ್ಮ ಆದರಣೆಗಾಗಿ ಹೆಚ್ಚಾಗಿ ಬಹಳ ಮಾನವತೆಯಿಂದ ಕಂಡು ಬರುತ್ತಾನೆ. ಆತನು ತನ್ನ ತಾಯಿಗೆ ಅಗೌರವವುಳ್ಳವನು ಕ್ರೂರನು ಆಗಿದ್ದನೆಂದು ನಾನು ನಂಬುವದಿಲ್ಲ, ತನ್ನ ಹೆಚ್ಚು ದೊಡ್ಡ ಸೇವೆಯನ್ನು ಜಟಿಲಗೊಳಿಸಬಹುದಾದ ಪರಿಸ್ಥಿತಿಯಲ್ಲಿ ಆತನು ಒಳಗೊಳ್ಳುವದನ್ನು ಒತ್ತಿ ಹೇಳುವ

ಮರಿಯಳ ಮೇಲೆ ಯೇಸುವು ಹತಾಶೆಯನ್ನು ವ್ಯಕ್ತಪಡಿಸಿದನೆಂದು ನಾನು ನಂಬುತ್ತೇನೆ.

ಯೇಸುವು ಮಾನವ ಕುಟುಂಬಕ್ಕೆ ಹೊಂದಿಕೊಂಡಿರುವದರ ಶ್ರಮೆ ಮತ್ತು ಒತ್ತಡಗಳೊಂದಿಗೆ ಹೊಂದಿಕೊಂಡು ಹೋಗುವದನ್ನು ನೋಡುವುದು ನಮಗೆ ಬಹಳ ಮಹತ್ವದ್ದಾಗಿದೆ. ಆತನ ಅಸ್ತಿತ್ವದ ಭಾಗವು "ಶರೀರ"ವಾಗಿದ್ದುದು ಆತನು ಜೀವನವನ್ನು ಒಬ್ಬ ಮಗನಂತೆ ಮತ್ತು ಒಬ್ಬ ಸಹೋದರನಂತೆ ಅನುಭವಿಸಿದ್ದಾಗಿದೆ. ಅನಂತರ, ಅಧ್ಯಾಯ 7ರಲ್ಲಿ ಸಹೋದರ ಪೈಪೋಟಿಯನ್ನು ನೋಡುತ್ತೇವೆ, ಯಾಕೆಂದರೆ ಯೇಸುವಿನ ಸಹೋದರರು ಆತನ ಹಬ್ಬುತ್ತಿರುವ ಕೀರ್ತಿಗೆ ಮತ್ಸರದಿಂದಲೂ ವಿರೋಧತ್ವದಿದಂಲೂ ಪ್ರತಿಕ್ರಿಯೆ ತೋರಿಸಿದರು. ಯೇಸುವು ತನ್ನ ತಾಯಿಯ ಸಮಸ್ಯೆಯನ್ನು ಪರಿಹರಿಸುವದನ್ನು ಮತ್ತು ಆತನ ಸಹೋದರರ ಕೆಟ್ಟ ಮನೋಭಾವನೆಗಳನ್ನು ಕೇಳುವದನ್ನು ಗಮನಿಸುವುದು ನಾವು ಬೇರೆ ರೀತಿಯಿಂದ ಕಂಡುಕೊಳ್ಳುವದಕ್ಕಿಂತ ಆತನ ಬಗ್ಗೆ ಹೆಚ್ಚು ಉತ್ತಮವಾದ ಚಿತ್ರವನ್ನು ಕೊಡುತ್ತದೆ.

ಕುಟುಂಬವು, ಯೇಸುವಿಗಾಗಿ ಮತ್ತು ನಮಗಾಗಿ, ಬಹಳವಾಗಿ ಮಹತ್ವದ್ದಾಗಿದೆ, ಅದೇ ಸಮಯದಲ್ಲಿ, ಕುಟುಂಬವು ನಮ್ಮ ಜೀವಿತಗಳನ್ನು ಜಟಿಲಗೊಳಿಸುತ್ತದೆ. ಕುಟುಂಬದ ಸಂಬಂಧಗಳು ಅವ್ಯವಸ್ಥೆಯಿಂದ ತುಂಬಿಕೊಂಡಿವೆ, ನಾವು ಆಯ್ಕೆ ಮಾಡಿಕೊಳ್ಳುವ ಪರಿಸ್ಥಿತಿಗಳೊಂದಿಗೆ ನಮ್ಮನ್ನು ಎದುರಿಸುವಂತೆ ಮಾಡುತ್ತದೆ. ನಮ್ಮ ಕುಟುಂಬಗಳೊಂದಿಗೆ ನಮ್ಮ ಅತೀ ದೊಡ್ಡ ಆನಂದಗಳಲ್ಲಿ ಮತ್ತು ಅತೀ ಆಳವಾದ ನೋವುಗಳಲ್ಲಿ ಕೆಲವನ್ನು ನಾವು ತಿಳಿದಿರುತ್ತೇವೆ. ಸಂಬಂಧಗಳು ತೀವ್ರವಾಗಿ ನಿಕಟವಾಗಿರುತ್ತವೆ, ಸತತವಾಗಿ ಬದಲಾಯಿಸುತ್ತಿರುತ್ತವೆ; ಮತ್ತು ಬಹಳಸಲ ಗಲಿಬಿಲಿಗೊಂಡಿರುತ್ತವೆ, ನಾವು ನಮ್ಮ ತಂದೆ ತಾಯಿಗಳನ್ನು ಅವರು ಪ್ರತಿಯೊಂದನ್ನು ತಿಳಿದಿರುವ ದೇವರಂತಿರುವ ಜೀವಿಗಳಂತೆ ನೋಡಲು ಪ್ರಾರಂಭಿಸುತ್ತೇವೆ, ಆಮೇಲೆ ಅವರು ಏನನ್ನಾದರೂ ತಿಳಿದಿರುವರೋ ಎಂದು ಆಶ್ಚರ್ಯಪಡುವ ಸಮಯಕ್ಕೆ ಮುಂದುವರಿಯುತ್ತೇವೆ, ಅವರ ಜ್ಞಾನದಿಂದ ಪುನಃ ಪ್ರಭಾವಿತರಾಗಿ ಒಂದು ಸಮಯಕ್ಕೆ ಹಿಂದಿರುಗಿ ಬರುತ್ತೇವೆ. ನಮ್ಮ ಜೀವನದ ಹೆಚ್ಚಿನದಕ್ಕಾಗಿ ನಾವು ನಮ್ಮ ಮೇಲೆ ಇತರರಿಗೆ ಎಷ್ಟು ನಿಯಂತ್ರಣವಿರಬೇಕೆಂದು ಚರ್ಚಿಸುವಾಗ ಒಬ್ಬನ ಮೇಲೆ ಎಷ್ಟು ನಿಯಂತ್ರಣವನ್ನು ನಾವು ಸಾಧಿಸಬೇಕು ಎಂದು ಆಶ್ಚರ್ಯಪಡುತ್ತ ಸಂತತಿಗಳ ಮಧ್ಯದಲ್ಲಿ ನಿಂತುಕೊಳ್ಳುತ್ತೇವೆ.

ಯೇಸುವು, ಮದುವೆಯಲ್ಲಿ, ಒಂದು ಕುಟುಂಬದ ಗಲಿಬಿಲಿಪಡಿಸುವ ಸೆಳೆತಗಳಿಂದ ಭಿನ್ನವಾದ ದಿಕ್ಕುಗಳ ಕಡೆಗೆ ಎಳೆಯಲ್ಪಟ್ಟನು. ನಾವು ಆತನನ್ನು ಆತನ ತಾಯಿಗಾಗಿ ಪ್ರೀತಿಯ ಮತ್ತು ಗೌರವದ ಹಾಗೂ ಇನ್ನೊಂದರ ಮೇಲೆ ಕರ್ತವ್ಯಕ್ಕೆ ತನ್ನ ಸಮರ್ಪಣೆಯನ್ನು ಮಧ್ಯದಲ್ಲಿ ನಿಂತಿರುವಂತೆ ನೋಡುತ್ತೇವೆ. ಆತನದು "ಒಳ್ಳೇಯದರ" ಮತ್ತು "ಅತ್ಯುತ್ತಮವಾದದ್ದರ" ಮಧ್ಯದಲ್ಲಿ ಒಂದು ಭಯಂಕರ ಘರ್ಷಣೆಯಾಗಿತ್ತು. ಆತನು ತನ್ನ ಅಪೇಕ್ಷೆಗಳನ್ನು ಮತ್ತು ತಂದೆಯ ಚಿತ್ತವನ್ನು ಸಮಗೊಳಿಸಲು ಆತನು ಒತ್ತಾಯಿಸಲ್ಪಟ್ಟನು, ಯೇಸುವನ್ನು ಒಬ್ಬ ಪತಿಯಂತೆ ಇಲ್ಲವೇ ತಂದೆಯಂತೆ ನೋಡಲು ನಮಗೆ ಎಂದಿಗೂ ಅವಕಾಶ ಸಿಕ್ಕದೇ ಇರುವಾಗ, ಆತನನ್ನು ಒಬ್ಬ ಮೌನವಸ್ಥ ಮಗನಂತೆ, ಒಂದು ಕುಟುಂಬದ ಭಾಗವಾಗಿರುವದರಿಂದ ತರಲ್ಪಟ್ಟ ಕಠಿಣವಾದ ಪರಿಸ್ಥಿತಿಯೊಂದಿಗೆ ವ್ಯವಹರಿಸುವದನ್ನು ನೋಡುತ್ತೇವೆ. ಅದಕ್ಕಾಗಿ, ಕುಟುಂಬದಲ್ಲಿ ಜೀವಿಸುವ ನಾವು ಕೃತಜ್ಞತೆಯುಳ್ಳವರಾಗಿರಬೇಕು.

## ಯೇಸುವು ದೇವರ ಮಹಿಮೆಯನ್ನು ಪ್ರಕಟಿಸಿದನು (2:6-11)

ಅದ್ಭುತ ಕಾರ್ಯಗಳನ್ನು ಮಾಡುವವನಂತೆ ವಿಶಾಲವಾಗಿ ತಿಳಿಯಲ್ಪಡುವದಕ್ಕೆ ಅದು ಇನ್ನೂ ಸಮಯವಾಗಿರುವದಿಲ್ಲ ಎಂದು ಆತನು ತನ್ನ ತಾಯಿಗೆ ಹೇಳಿದ ನಂತರ, ಯೇಸುವು ಔತಣದಲ್ಲಿದ್ದ ಸೇವಕರ ಕಡೆಗೆ ತಿರುಗಿಕೊಂಡು, ಸಮೀಪದಲ್ಲಿದ್ದ ಆರು ನೀರಿನ ಕಲ್ಲಿನ ಬಾನೆಗಳನ್ನು ನೀರಿನಿಂದ ತುಂಬಿಸಬೇಕೆಂದು ಹೇಳಿದನು. ಅವರು ತಮಗೆ ಹೇಳಲ್ಪಟ್ಟಂತೆ

ಬಾನೆಗಳನ್ನು ಕಂಠಮಟ್ಟದವರೆಗೆ ತುಂಬಿಸಿದರು. ಆಗ ಆತನು ಸೇವಕರಿಗೆ ಅದನ್ನು ಮಾಡಿಕೊಂಡು ಹೋಗಿ ಔತಣದ ಪಾರುಪತ್ತೇಗಾರನಿಗೆ ಕೊಡಬೇಕೆಂದು ಹೇಳಿದನು. ಪುನಃ ಅವರು ನಂಬಿಗಸ್ತಿಕೆಯಿಂದ ವಿಧೇಯರಾದರು, ಪಾರುಪತ್ತೇಗಾರನು ನೀರನ್ನು ರುಚಿನೋಡಿದಾಗ, ಅದು ದ್ರಾಕ್ಷಾರಸವಾದದ್ದನ್ನು ಕಂಡುಕೊಂಡನು, ಅದು ಮದುವೆಯ ಔತಣದಲ್ಲಿ ಅತ್ಯುತ್ತಮ ದ್ರಾಕ್ಷಾರಸವಾಗಿತ್ತು! ಅವನು ಮದುಮಗನನ್ನು ಕರೆದು ಅತ್ಯುತ್ತಮ ದ್ರಾಕ್ಷಾರಸವನ್ನು ಕೊನೆಯವರೆಗೆ ಉಳಿಸಿಕೊಳ್ಳುವ ಕುತೂಹಲಕಾರೀ ರೂಢಿಯ ಬಗ್ಗೆ ಕೇಳಿದನು.

ಈ ಪ್ರಾಸಂಗಿಕ ಕಥೆಯನ್ನು, "ಯೇಸು ಈ ಮೊದಲನೆಯ ಸೂಚಕ ಕಾರ್ಯವನ್ನು ಮಾಡಿ ತನ್ನ ಮಹಿಮೆಯನ್ನು ತೋರ್ಪಡಿಸಿದನು ಮತ್ತು ಶಿಷ್ಯರು ಆತನಲ್ಲಿ ನಂಬಿಕೆಯಿಟ್ಟರು" (2:11) ಎಂದು ಯೋಹಾನನು ಬರೆಯುವದರಿಂದ ಮುಕ್ತಾಯಗೊಳಿಸಿದನು. "ಸೂಚಕ ಕಾರ್ಯ" ಎಂಬುದು ಯೋಹಾನನಿಗೆ ಒಂದು ಮಹತ್ವದ ಪದವಾಗಿತ್ತು. 2ರಿಂದ 12ನೆಯ, ಅಧ್ಯಾಯದವರೆಗಿನ ಅಧ್ಯಾಯಗಳಲ್ಲಿ ಏಳು ಪ್ರಮುಖ ಸೂಚಕ ಕಾರ್ಯಗಳು ದಾಖಲಿಸಲ್ಪಟ್ಟಿವೆ. ಈ ಪದವು ಯೇಸುವು ಮಾಡಿದ, ಬಲವಾದ ಕಾರ್ಯಗಳಿಗಾಗಿ ಇಲ್ಲವೇ ಅದ್ಭುತ ಕಾರ್ಯಗಳಿಗಾಗಿ ಉಪಯೋಗಿ ಸಲ್ಪಟ್ಟಿದೆ. ಹೀಗಿದ್ದರೂ, ಸೂಚಕಕಾರ್ಯವು ಒಂದು ಅದ್ಭುತ ಕಾರ್ಯಕ್ಕಿಂತ ಎಷ್ಟೋ ಹೆಚ್ಚಿನದಾಗಿದೆ; ಅದು ಆ ಅದ್ಭುತ ಕಾರ್ಯದ ಮೂಲನಾದ - ತನ್ನ ಕುಮಾರನಾದ ಯೇಸುವಿನಲ್ಲಿ ಕಾರ್ಯನಿರತನಾದ ದೇವರ ಕಡೆಗೆ ಜನರನ್ನು ತೋರಿಸುತ್ತದೆ. ನೀರನ್ನು ದ್ರಾಕ್ಷಾರಸವಾಗಿ ಮಾರ್ಪಡಿಸಿದ ಸೂಚಕ ಕಾರ್ಯವನ್ನು ಮಾಡುವಲ್ಲಿ, ಯೇಸುವು "ತನ್ನ ಮಹಿಮೆಯನ್ನು ತೋರ್ಪಡಿಸಿದನು" (2:11), ದೇವರು ನಿಜವಾಗಿಯೂ ತನ್ನೊಂದಿಗಿದ್ದಾನೆ ಎಂಬುದನ್ನು ಪ್ರದರ್ಶಿಸಿತು. ಒಂದು ಸೂಚಕ ಕಾರ್ಯಕ್ಕೆ ಸಾಕ್ಷಿ ಕೊಡುವುದಕ್ಕೆ ಯೋಗ್ಯವಾದ ಉತ್ತರವು ಯೇಸುವಿನ ಶಿಷ್ಯರು ಸ್ಪಷ್ಟವಾಗಿ ಮಾಡಿದ್ದೇ ಆಗಿದೆ; ಅವರು ನಂಬಿದರು. "ಸೂಚಕ ಕಾರ್ಯಗಳು" ಮತ್ತು "ನಂಬು" ಎಂಬ ಎರಡು ಪ್ರಮುಖ ಪದಗಳು ಈ ಸುವಾರ್ತೆಗಾಗಿ ಯೋಹಾನನ ಉದ್ದೇಶದ ಹೇಳಿಕೆಯಲ್ಲಿ ಒಟ್ಟಾಗಿ ಕಾಣಿಸಿ ಕೊಳ್ಳುತ್ತವೆ:

> ಯೇಸು ಇನ್ನು ಬೇರೆ ಎಷ್ಟೋ *ಸೂಚಕ* ಕಾರ್ಯಗಳನ್ನು ತನ್ನ ಶಿಷ್ಯರ ಮುಂದೆ ಮಾಡಿದನು, ಅವುಗಳು ಈ ಗ್ರಂಥದಲ್ಲಿ ಬರೆದಿರುವದಿಲ್ಲ, ಆದರೆ ಯೇಸು ದೇವ ಕುಮಾರನಾದ ಕ್ರಿಸ್ತನೆಂದು ನೀವು ನಂಬುವಂತೆಯೂ, *ನಂಬಿ* ಆತನ ಹೆಸರಿನ ಮೂಲಕವಾಗಿ ಜೀವವನ್ನು ಪಡಕೊಳ್ಳುವಂತೆಯೂ ಇಷ್ಟೆಲ್ಲಾ ಬರೆದಿದೆ (20:30, 31; ಒತ್ತಿ ಹೇಳಿದ್ದು ನನ್ನದು).

## ಮುಕ್ತಾಯ

ಈ ಪ್ರಭಾವ ಬೀರುವ ಘಟನೆಯು ನಂಬಲಿಕ್ಕೆ ಒಂದು ಸ್ಪಷ್ಟವಾದ ಆಮಂತ್ರಣವನ್ನು ನಮ್ಮೊಂದಿಗೆ ಬಿಡುತ್ತದೆ; ಸೂಚಕ ಕಾರ್ಯವು ಯೇಸುವು ತಾನು ಯಾರಾಗಿದ್ದೇನೆಂದು ಹೇಳಿದ್ದನೋ ಅದನ್ನು ಪ್ರದರ್ಶಿಸಿದನು. ಯೇಸುವಿಗೆ ಭೌತದ್ರವ್ಯಗಳನ್ನು ಬದಲಾಯಿಸುವ ಶಕ್ತಿಯು ಇತ್ತು ಎಂಬುದನ್ನು ಅದು ಪ್ರದರ್ಶಿಸಿತು. ಈ ಕಥೆಯಲ್ಲಿ ನೀರು ದ್ರಾಕ್ಷಾರಸವಾಯಿತು; ಅನಂತರದಲ್ಲಿ ಕತ್ತಲೆಯಲ್ಲಿ ಕಳೆದು ಹೋದವರು ಬೆಳಕನ್ನು ಹೊರುವ ದೇವರ ಮಕ್ಕಳಾಗಿ ಬದಲಾಯಿಸಲ್ಪಟ್ಟರು. ಹೀಗಿದ್ದರೂ, ಈ ಪಠ್ಯವು ಇಡೀ ಯೋಹಾನನ ಸುವಾರ್ತೆಯ ಹಿನ್ನೆಲೆಯಲ್ಲಿ ಉಳಿಯತಕ್ಕದ್ದು ಎಂಬುದನ್ನು ಜ್ಞಾಪಕದಲ್ಲಿ ಇಟ್ಟು ಕೊಳ್ಳಿರಿ. ಇದು ಯೇಸು ಮಾಡಿದ ಸೂಚಕ ಕಾರ್ಯಗಳಲ್ಲಿ ಮೊದಲನೆಯದು - ಮತ್ತು ಬಹುಶಃ ಚಿಕ್ಕದಾದದ್ದು ಆಗಿರುತ್ತದೆ ಅನಂತರದಲ್ಲಿ ಹೆಚ್ಚು ದೊಡ್ಡ ವಿಶ್ವಾಸಕ್ಕಾಗಿ ಕರೆಯುವ ಹೆಚ್ಚು ದೊಡ್ಡ ಸೂಚಕ ಕಾರ್ಯಗಳನ್ನು ನೋಡುವೆವು. ಈ ಹಂತದಲ್ಲಿ "ನೀನು ಸೂಚಕ ಕಾರ್ಯವನ್ನು ನೋಡು

ವಿಯೋ? ಯೇಸುವಿನ ಬಗ್ಗೆ ನೀನು ಏನನ್ನು ಯೋಚಿಸುವಿ? ನೀನು ನಂಬಿಕೆಯಲ್ಲಿ ಬೆಳೆಯುತ್ತಿರುವಿಯೋ? ನೀನು ಹುಡುಕುವದನ್ನು, ಕೇಳುವದನ್ನು, ಗಮನಿಸುವದನ್ನು, ಮತ್ತು ಹಿಂಬಾಲಿಸುವದನ್ನು ಮುಂದುವರಿಸುವಿಯೋ?" ಎಂದು ಕೇಳುವುದು ಸಾಕಷ್ಟಾಗಿದೆ.

ಟಿಪ್ಪಣಿಗಳು

[1]C. H. Spurgeon, *Lectures to My Students* (Grand Rapids, Mich.: Zondervan Publishing House, 1970), 170. [2]William Barclay, *The Gospel of John,* vol. 1, The Daily Study Bible Series, rev. ed. (Philadelphia: Westminster Press), 85.